0401/2056/0801/1419

IV Semester 3 Year LL.B./VIII Semester 5 Year B.A. LL.B./B.A. LL.B. (Maj-Min. System)/ B.B.A. LL.B./B.Com. LL.B. Examination, July/August 2026

PUBLIC INTERNATIONAL LAW

Duration : 3 Hours | Max. Marks : 100

Instructions :
1. Answer Q. No. 9 and any five of the remaining questions.
2. Q. No. 9 carries 20 marks and the remaining questions carry 16 marks each.
3. Answer should be written either in English or Kannada completely.

Q. No. 1. Define International Law and explain the sources of International Law. Marks : 16
ಅಂತಾರಾಷ್ಟ್ರೀಯ ಕಾನೂನನ್ನು ಪರಿಭಾಷಿಸಿರಿ ಮತ್ತು ಅಂತಾರಾಷ್ಟ್ರೀಯ ಕಾನೂನಿನ ಮೂಲಗಳನ್ನು ವಿವರಿಸಿ.

Q. No. 2. Critically examine the various theories of recognition. Marks : 16
ಮನ್ನಣೆಯ ವಿವಿಧ ಸಿದ್ಧಾಂತಗಳನ್ನು ಟೀಕಾತ್ಮಕವಾಗಿ ಪರೀಕ್ಷಿಸಿರಿ.

Q. No. 3. Explain the theories and kinds of State succession. Marks : 16
ರಾಜ್ಯದ ಉತ್ತರಾಧಿಕಾರದ ಸಿದ್ಧಾಂತಗಳು ಮತ್ತು ಪ್ರಕಾರಗಳನ್ನು ವಿವರಿಸಿರಿ.

Q. No. 4. Discuss the different modes of acquisition and termination of Nationality. Marks : 16
ರಾಷ್ಟ್ರೀಯತೆಯನ್ನು ಪಡೆದುಕೊಳ್ಳುವ ಮತ್ತು ಕಳೆದುಕೊಳ್ಳುವ ವಿವಿಧ ವಿಧಾನಗಳನ್ನು ಚರ್ಚಿಸಿರಿ.

Q. No. 5. Define Territorial Jurisdiction of the State. Explain the principles governing Territorial Jurisdiction. Marks : 16
ರಾಜ್ಯದ ಪ್ರಾದೇಶಿಕ ನ್ಯಾಯಾಧಿಕಾರವನ್ನು ವ್ಯಾಖ್ಯಾನಿಸಿ. ಪ್ರಾದೇಶಿಕ ನ್ಯಾಯಾಧಿಕಾರವನ್ನು ನಿರ್ದೇಶಿಸುವ ತತ್ವಗಳನ್ನು ವಿವರಿಸಿರಿ.

Q. No. 6. Examine the practices of States in relation to formation and termination of treaty. Marks : 16
ಒಪ್ಪಂದದ ರಚನೆ ಮತ್ತು ಕೊನೆಗೊಳಿಸುವಿಕೆ ಸಂಬಂಧದ ರಾಜ್ಯಗಳ ಆಚರಣೆಗಳನ್ನು ಪರಿಶೀಲಿಸಿರಿ.

Q. No. 7. State the purposes and principles of United Nations Organisation. Marks : 16
ಸಂಯುಕ್ತ ರಾಷ್ಟ್ರ ಸಂಘದ ಉದ್ದೇಶಗಳನ್ನು ಮತ್ತು ತತ್ವಗಳನ್ನು ತಿಳಿಸಿ.

Q. No. 8. Write short note on **any two** of the following : Marks : 2×8=16

(a) Asylum. Marks : 8
ರಾಜ್ಯಾಶ್ರಯ.

(b) International Labour Organisation. Marks : 8
ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ.

(c) Canals. Marks : 8
ಕಾಲುವೆಗಳು.

P.T.O.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ **ಎರಡು** ಪ್ರಕರಣಗಳನ್ನು ಪರಿಹರಿಸಿ.

(a) State 'A' claims sovereignty over an Island on the ground that it has discovered the same, but State 'A' has no effective sovereignty on the Island. State 'B' also claims sovereignty on the same Island on the ground that it has effective control and sovereignty over the Island for last three hundred years. Which State has sovereignty over the Island ? Marks : 10

'ಎ' ಎಂಬ ರಾಷ್ಟ್ರವು ಒಂದು ದ್ವೀಪದ ಮೇಲೆ ಪರಿಣಾಮಕಾರಿ ಸಾರ್ವಭೌಮತ್ವವನ್ನು ಹೊಂದದೇ ಕೇವಲ ತಾನು ಆ ದ್ವೀಪವನ್ನು ಕಂಡುಹಿಡಿದ ಆಧಾರದ ಮೇಲೆ ಸಾರ್ವಭೌಮತ್ವದ ಹಕ್ಕೊತ್ತಾಯ ಮಾಡುತ್ತಿದೆ. ಅದೇ ದ್ವೀಪದ ಮೇಲೆ 'ಬಿ' ರಾಷ್ಟ್ರವು ಸಹ ತಾನು ಕಳೆದ ಮುನ್ನೂರು ವರುಷಗಳಿಂದ ಪರಿಣಾಮಕಾರಿ ಅಧಿಕಾರ ಮತ್ತು ಸಾರ್ವಭೌಮತ್ವವನ್ನು ಹೊಂದಿರುವುದರ ಮೇಲೆ ಸಾರ್ವಭೌಮತ್ವ ಹಕ್ಕೊತ್ತಾಯ ಮಾಡುತ್ತಿದೆ. ದ್ವೀಪದ ಮೇಲೆ ಯಾವ ರಾಷ್ಟ್ರವು ನಿಜವಾದ ಸಾರ್ವಭೌಮತ್ವವನ್ನು ಹೊಂದಿರುತ್ತದೆ ? ನಿರ್ಧರಿಸಿರಿ.

(b) 'X' a member of banned organization in State, 'Y' kills a minister of State 'Y' and flees to State 'Z'. State 'Y' demands his extradition. 'X' pleads he is a political offender. Decide. Marks : 10

'Y' ಎಂಬ ರಾಷ್ಟ್ರದಲ್ಲಿ ನಿಷೇಧಿಸಲ್ಪಟ್ಟ ಸಂಘಟನೆಯ ಸದಸ್ಯನಾದ 'X' ನು, ಆ ದೇಶದ ಒಬ್ಬ ಮಂತ್ರಿಯನ್ನು ಕೊಲೆಗೈದು 'Z' ರಾಷ್ಟ್ರಕ್ಕೆ ಓಡಿಹೋಗುತ್ತಾನೆ. 'Y' ರಾಷ್ಟ್ರವು ಆತನ ಪ್ರತ್ಯರ್ಪಣೆಗಾಗಿ ಮನವಿ ಮಾಡುತ್ತಿದೆ. ಆಗ 'X' ನು ತಾನೊಬ್ಬ ರಾಜಕೀಯ ಅಪರಾಧಿ ಎಂದು ವಾದಿಸುತ್ತಾನೆ. ನಿರ್ಧರಿಸಿರಿ.

(c) The King of State 'A' during his visit in State 'B' promised to marry Miss. Sophia subsequently the promise was not fullfilled. Miss. Sophia files a case in State 'B' for breach of promise. Decide. Marks : 10

'ಎ' ರಾಜ್ಯದ ಅರಸನು 'ಬಿ' ರಾಜ್ಯಕ್ಕೆ ಭೇಟಿ ನೀಡಿದ್ದಾಗ ಮಿಸ್. ಸೋಫಿಯಾ ಎಂಬುವವರನ್ನು ವಿವಾಹವಾಗುವುದಾಗಿ ವಾಗ್ದಾನ ಮಾಡುತ್ತಾನೆ. ನಂತರ ಅವರು ತನ್ನ ವಾಗ್ದಾನವನ್ನು ನೆರವೇರಿಸಲಿಲ್ಲ. ಮಿಸ್. ಸೋಫಿಯಾ 'ಬಿ' ರಾಷ್ಟ್ರದ ನ್ಯಾಯಾಲಯದಲ್ಲಿ ವಾಗ್ದಾನ ಭಂಗಕ್ಕಾಗಿ ದಾವೆ ಹೂಡುತ್ತಾರೆ. ನಿರ್ಧರಿಸಿರಿ.
